558(579) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾಂ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳು ತೀವ್ರ ಬರಗಾಲ ಉಂಟಾಗಿರುವ ಪರಿಣಾಮ ಅಗತ್ಯ ನೀರಿಗೆ ಕೈಗೊಂಡ ಕ್ರಮಗಳೇನು;

ಆ) ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿ ಮೂಲಕ ನೀರು ಹರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಇ) ಇದಕ್ಕೆ ಮಹಾರಾಷ್ಟ್ರ ಸರ್ಕಾರದ ಪ್ರತಿಕ್ರಿಯೆ ಏನು;

ಈ) ಈಗಾಗಲೇ ನೀರು ಬಿಡುಗಡೆ ಮಾಡಲಾಗಿದೆಯೇ ಮತ್ತು ಎಷ್ಟು ಟಿ.ಎಂ.ಸಿ. ನೀರು ಬಿಡುಗಡೆ ಮಾಡಲಾಗಿದೆ; ಹಾಗೂ ಇದರ ಉಪಯೋಗ ಯಾವ ಪ್ರದೇಶಕ್ಕಾಗಿದೆ;

ಉ) ನೀರು ತಲುಪದಿರುವ ಕೆಲವು ಪ್ರದೇಶಗಳಿಗೆ ಯಾವ ಕ್ರಮ ಜರುಗಿಸಲಾಗುತ್ತಿದೆ ಇದಕ್ಕಾಗಿ ಮಹಾರಾಷ್ಟ್ರದೊಂದಿಗೆ ಮಾತುಕತೆ ಮಾಡಲಾಗಿದೆಯೇ ಮತ್ತು ಪ್ರಗತಿ ಯಾವ ಹಂತದಲ್ಲಿದೆ ವಿವರಿಸಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಬೆಳಗಾಂ ಜಿಲ್ಲೆಯ ಕೃಷ್ಣಾ ನದಿಯ ದಂಡೆಯಲ್ಲಿ ಚಿಕ್ಕೋಡಿ, ರಾಯಬಾಗ್, ಅಥಣಿ ಹಾಗೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿ ತೀವ್ರ ಬರಗಾಲದಿಂದ ಕುಡಿಯುವ ನೀರಿನ ಅಭಾವ ಉಂಟಾಗಿದ್ದು, ಕರ್ನಾಟಕ ರಾಜ್ಯದ ಹಿಡಕಲ್ ಜಲಾಶಯದಿಂದ ಘಟಪ್ರಭಾ ನದಿಯ ಮೂಲಕ ನೀರನ್ನು ಹರಿಸಿ, ದೂದ್‌ಗಂಗಾ ಅಂತರರಾಜ್ಯ ಯೋಜನೆಯ ಒಪ್ಪಂದದಡಿ ಕಳ್ಳಂವಾಡಿ ಜಲಾಶಯದಿಂದ ಕರ್ನಾಟಕ ರಾಜ್ಯದ ಪಾಲಿನ ನೀರಿನಲ್ಲಿ ನೀರನ್ನು ಪಡೆದು ಹಾಗೂ ಮಹಾರಾಷ್ಟ್ರದಿಂದ ಕೊಯ್ನಾ, ವಾರಣಾದಿಂದ ಕೂಡ ನೀರನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ, ಬಿಜಾಪುರ ಜಿಲ್ಲೆಯಲ್ಲಿ ಭೀಮಾ ನದಿಯ ದಂಡೆಯ ಮೇಲಿರುವ ಗ್ರಾಮಗಳಲ್ಲಿ ಮಹಾರಾಷ್ಟ್ರ ಸರ್ಕಾರವು ಉಜನಿ ಜಲಾಶಯದಿಂದ ಸೋಲಾಪುರ ಹಾಗೂ ಅಕ್ಕಲಕೋಟ್ ಪಟ್ಟಣಗಳಿಗೆ ಕುಡಿಯುವ ನೀರಿನ ಅಭಾವವನ್ನು ಪೂರೈಸಲು ಭೀಮಾ ನದಿಯಲ್ಲಿ ಬಿಡುಗಡೆ ಮಾಡಿದ ನೀರನ್ನು ಕರ್ನಾಟಕದ ಗ್ರಾಮದ ಜನ ಜಾನುವಾರುಗಳೂ ಸಹ ಕುಡಿಯುವ ನೀರಿನ ಬಳಕೆಗಾಗಿ ಉಪಯೋಗ ಪಡೆದಿರುತ್ತಾರೆ.

ಬಾಗಲಕೋಟೆ ಜಿಲ್ಲೆಯಲ್ಲಿ ಜಮಖಂಡಿ ಹಾಗೂ ಇತರ ಭಾಗಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ಶಾಶ್ವತವಾಗಿ ಪರಿಹರಿಸಲು ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬ್ಯಾರೇಜ್‌ನ್ನು ನಿರ್ಮಿಸಲಾಗಿದೆ.

ಆ) ಬೆಳಗಾಂ ಜಿಲ್ಲೆಯ ರಾಯಬಾಗ್, ಚಿಕ್ಕೋಡಿ ಹಾಗೂ ಅಥಣಿ ತಾಲ್ಲೂಕುಗಳಲ್ಲಿ ಕೃಷ್ಣಾ ನದಿಯ ದಂಡೆಯ ಮೇಲಿರುವ ಗ್ರಾಮಗಳಿಗೆ ಹಾಗೂ ಪಟ್ಟಣಗಳಿಗೆ ಕುಡಿಯುವ ನೀರಿನ ಅಭಾವವನ್ನು ಪೂರೈಸಲು ಮಹಾರಾಷ್ಟ್ರದ ವಾರಣಾ ಜಲಾಶಯದಿಂದ ರಾಜಾಪೂರ ಬ್ಯಾರೇಜಿನಿಂದ ಕೃಷ್ಣಾ ನದಿ ಮೂಲಕ ನೀರು ಹರಿಸಲು ಸರ್ಕಾರವು ಕ್ರಮ ತೆಗೆಯಕೊಂಡಿದೆ.

ಇ) ಮಹಾರಾಷ್ಟ್ರ ಸರ್ಕಾರವು ದಿನಾಂಕ 13–4–2004 ರಿಂದ 27–4–2004ರವರೆಗೆ ನೀರನ್ನು ಬಿಡುಗಡೆ ಮಾಡಿದೆ.

ಈ) ಹೌದು, ಈಗಾಗಲೇ ರಾಜಾಪೂರ ಬ್ಯಾರೇಜಿನಿಂದ 2004ನೇ ಸಾಲಿನಲ್ಲಿ 1.00 ಟಿಎಂಸಿ ನೀರನ್ನು ಬಿಡುಗಡೆ ಮಾಡಲಾಗಿದ್ದು. ಇದರಿಂದ ಬೆಳಗಾಂವ ಜಿಲ್ಲೆಯ ಚಿಕ್ಕೋಡಿ, ರಾಯಬಾಗ್ ಮತ್ತು ಅಥಣಿ ತಾಲ್ಲೂಕುಗಳಲ್ಲಿ ಜನ ಜಾನುವಾರುಗಳ ಕುಡಿಯುವ ನೀರಿನ ಬಳಕೆಗಾಗಿ ಉಪಯೋಗಿಸಲಾಗಿದೆ.

ಉ) ನೀರು ತಲುಪದಿರುವ ಕೆಲವು ಪ್ರದೇಶಗಳಿಗೂ ಸಹ ನೀರು ಒದಗಿಸಲು ಮಹಾರಾಷ್ಟ್ರದಿಂದ ಹೆಚ್ಚಿನ ನೀರು ಬಿಡಿಸುವ ಕೋರಿಕೆಯೊಂದಿಗೆ, ಕರ್ನಾಟಕ ರಾಜ್ಯದಿಂದ ಒಂದು ತಂಡವು ಮಹಾರಾಷ್ಟ್ರಕ್ಕೆ ಭೇಟಿ ನೀಡಿತ್ತು. ಆದರೆ ಮಹಾರಾಷ್ಟ್ರವು ರಾಜ್ಯದ ಕೋರಿಕೆಯನ್ನು ನಿರಾಕರಿಸಿರುತ್ತದೆ.

559(582) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಏಷ್ಯಾದ ಅತಿದೊಡ್ಡ ನೀರಾವರಿ ಮತ್ತು ಪುನರ್ವಸತಿ ಯೋಜನೆಯಾಗಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಎಂಬುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ತಿಳಿದಿದ್ದಲ್ಲಿ ಸಧ್ಯದ ಸ್ಥಿತಿ–ಗತಿ ಏನು; (ಪೂರ್ಣ ವಿವರ ನೀಡುವುದು);

ಇ) ಸದರಿ ಯೋಜನೆಯ ಮುಖ್ಯ ಹುದ್ದೆಗಳೆ ಖಾಲಿ ಬಿದ್ದಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಯಾವ ಯಾವ ಪ್ರಮುಖ ಹುದ್ದೆಗಳು ಖಾಲಿ ಇವೆ;

ಉ) 12 ಸಾವಿರ ಕೋಟಿ ರೂ. ವೆಚ್ಚದಲ್ಲಿ 20 ಲಕ್ಷ ಎಕರೆ ಜಮೀನಿಗೆ ನೀರಾವರಿ ಕಲ್ಪಿಸುವ ಇದಕ್ಕೆ ಈ ಗತಿಯಾದರೆ ಯೋಜನೆ ಕುಂಠಿತವಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ;

ಊ) ಭಾವಿಸಿದ್ದಲ್ಲಿ ಪ್ರಮುಖ ಹುದ್ದೆಗಳು ಖಾಲಿ ಇರಲು ಕಾರಣಗಳೇನು ಹಾಗೂ ಈ ಹುದ್ದೆಗಳ ಭರ್ತಿಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ;

ಋ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುತ್ತದೆ ಹಾಗೂ ನೇಮಕ ವಿಳಂಬದಿಂದ ಉಂಟಾದ ಅವ್ಯವಸ್ಥೆ ಗೊಂದಲಗಳಿಗೆ ಯಾವ ಪರಿಹಾರ ಒದಗಿಸಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ತಿಳಿದಿದೆ

ಆ) ಈ ಯೋಜನೆಯಡಿಯಲ್ಲಿ ವಿವಿಧ ಅಂಗಗಳ ಇತ್ತೀಚಿನ ಪರಿಸ್ಥಿತಿಯನ್ನು ಈ ಕೆಳಗಿ ವಿವರಿಸಿದೆ.

1. ಆಲಮಟ್ಟಿ ಅಣೆಕಟ್ಟು – ಮುಗಿದಿದೆ
2. ನಾರಾಯಣಪುರ ಅಣೆಕಟ್ಟು – ಮುಗಿದಿದೆ
3. ನಾರಾಯಣಪುರ ಎಡದಂಡೆ ಕಾಲುವೆ